ಪತ್ರಿಕಾ ಪ್ರಕಟಣೆಗಾಗಿ

# ನೆರೆ ಪರಿಹಾರದ ಲೋಪದೋಷ ಮತ್ತು ಸರ್ಕಾರದ ತುರ್ತು ಕ್ರಮದ ಕುರಿತು ಪತ್ರಿಕಾ ಸಮಾಲೋಚನೆ

ದಿನಾಂಕ: 17 ಫೆಬ್ರವರಿ, 2020

ಕರ್ನಾಟಕ ರಾಜ್ಯವು 2019 ಆಗಸ್ಟ್‌ರಲ್ಲಿ ಹಿಂದೆಂದು ಕಂಡರಿಯದ ತೀವ್ರವಾದ ನೆರೆ ಪರಿಸ್ಥಿತಿಯನ್ನು ಎದುರುಗೊಂಡಿತು. ರಾಜ್ಯದ 17 ಜಿಲ್ಲೆಗಳನ್ನು ಆವರಿಸಿದ ಈ ಪ್ರವಾಹ 7 ಲಕ್ಷಕ್ಕೂ ಹೆಚ್ಚು ಜನರನ್ನು ನಿರಾಶ್ರಿತರನ್ನಾಗಿಸಿ, ಸುಮಾರು 75,000 ಹೆಚ್ಚು ಕುಟುಂಬಗಳು ತಮ್ಮ ಮನೆಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ಹೀನಾಯ ಪರಿಸ್ಥಿತಿಯನ್ನು ಉಂಟುಮಾಡಿತು. ಸುಮಾರು 4.62 ಲಕ್ಷ ಹೆಕ್ಟೇರ್‌ಗಳ ಭೂಮಿಯ ಬೆಳೆನಾಶಕ್ಕೆ ಕಾರಣವಾಗಿ ಜನರು ಅದರಲ್ಲೂ ಹಿಂದುಳಿದ ಶೋಷಿತ ಸಮುದಾಯಗಳು ಮತ್ತಷ್ಟು ಸಂಕಷ್ಟಗಳನ್ನು ಅನುಭವಿಸುವಂತೆ ಮಾಡಿತು. ನೆರೆ ಹಾಗು ಭಾರಿ ಮಳೆಯಿಂದ ಮಕ್ಕಳು ಹಾಗು ಅವರ ಸಮುದಾಯಗಳಿಗೆ ತೀವ್ರವಾದ ಹಾನಿಯುಂಟಾಗಿದೆ. ವಾಸಿಸುವ ಮನೆ, ಬೆಳೆ, ಶಾಲೆ ಕಟ್ಟಡ, ಅಂಗನವಾಡಿ ಕೇಂದ್ರ ಹಾಗು ಪಂಚಾಯತ್ ಕಚೇರಿಗಳು ನೀರು ನುಗ್ಗಿ ಸಂಪೂರ್ಣವಾಗಿ ನಾಶಗೊಂಡಿವೆ. ಕರ್ನಾಟಕ ಸರ್ಕಾರದ ಪ್ರತಿಕ್ರಿಯೆಯು ಅಪೂರ್ಣ ಹಾಗು ಪರಿಣಾಮಕಾರಿಯಾಗಿ ನಿರ್ವಹಣೆಯಾಗಿಲ್ಲ. ನೆರೆ ಸಂದರ್ಭದಲ್ಲಿನ ಸರ್ಕಾರದ ತುರ್ತು ಪ್ರತಿಕ್ರಿಯೆಗಳು ಸಮುದಾಯಗಳು ತಮ್ಮ ಬದುಕುಗಳನ್ನು ಪುನಃ ಕಟ್ಟಿಕೊಳ್ಳುವ ನೆಲೆಯಲ್ಲಿ ಸಂಯೋಜನೆಗೊಂಡಿಲ್ಲದಿರುವುದರಿಂದ ಅವರಿಗೆ ಬೇಕಾದ ಸಹಾಯಹಸ್ತವು ದೊರಕಿಲ್ಲ. ಮಕ್ಕಳ ಹಕ್ಕುಗಳಾದ ರಕ್ಷಣೆಯ ಹಕ್ಕು, ವ್ಯವಸ್ಥೆಗಳನ್ನು ಪಡೆಯುವ ಹಕ್ಕು ಹಾಗು ಅವರ ಬದುಕಿನ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವ ವೇದಿಕೆಗಳಲ್ಲಿ ಅವರ ಸಮಸ್ಯೆಗಳನ್ನು ಹೇಳಿಕೊಳ್ಳಲು ಭಾಗವಹಿಸುವ ಹಕ್ಕುಗಳ ಗಂಭೀರ ಉಲ್ಲಂಘನೆಗಳನ್ನು ಗಮನಿಸಲಾಗಿದೆ. ಒಟ್ಟಾರೆ ಮಕ್ಕಳು ಹಾಗು ಸಮುದಾಯದವರ ಹಕ್ಕುಗಳ ಉಲ್ಲಂಘನೆಯ ವಿಷಯವನ್ನು ಕೆಳಗೆ ಚರ್ಚಿಸಿದ್ದೇವೆ. ಪ್ರವಾಹ ಸಂಭವಿಸಿ 7 ತಿಂಗಳು ಕಳೆದರೂ ಸಹ ಮಕ್ಕಳು ಹಾಗು ಸಮುದಾಯಗಳು ಬವಣೆಯನ್ನು ಅನುಭವಿಸುತ್ತಲೇ ಇದ್ದಾರೆ.

ನೆರೆಯಿಂದಾಗಿ ಜನಸಮುದಾಯಗಳು ತಾವು ವಾಸಿಸುವ ಮನೆಗಳನ್ನು ಕಳೆದುಕೊಂಡಿದ್ದು ಅವುಗಳ ಪುನರ್ ನಿರ್ಮಾಣದಲ್ಲಿ ಸರ್ಕಾರ ತೀರ ನಿರ್ಲಕ್ಷ್ಯ ವಹಿಸಿರುವುದರಿಂದ ಪರಿಹಾರಕ್ಕಾಗಿ ಅನುಸರಿಸಲಾಗಿರುವ ಪ್ರಕ್ರಿಯೆಗಳ ಲೋಪದೋಶ, ಅದರಿಂದ ತಲೆದೋರಿರುವ ಹಲವಾರು ಬಿಕ್ಕಟ್ಟುಗಳು, ಬೆಳೆ ನಾಶ ಹಾಗು ಜೀವನೋಪಾಯದ ನಾಶದಿಂದಾಗಿ ಅನುಭವಿಸುತ್ತಿರುವ ಸಂಕಷ್ಟಗಳು, ನದಿ ಪಾತ್ರದಲ್ಲಿ ಬದುಕುತ್ತಿರುವ ಸಮುದಾಯಗಳು ಪದೇ ಪದೇ ನೆರೆಯ ಹಾವಳಿಗೆ ತುತ್ತಾಗಿ ಎದುರಿಸುತ್ತಿರುವ ತಲ್ಲಣಗಳು, ಅತ್ಯಂತ ಶೋಚನೀಯ ಸ್ಥಿತಿಗೆ ದೂಡಲ್ಪಟ್ಟಿರುವ ಹಿರಿಯ ನಾಗರೀಕರು, ಮಹಿಳೆಯರಿಂದ ನಿರ್ವಹಣೆಗೊಂಡಿರುವ ಕುಟುಂಬಗಳು, ವಿಕಲಚೇತನರು ಮತ್ತು ಜಾತಿ ವ್ಯವಸ್ಥೆಯಿಂದ ಶೋಷಣೆಗೆ ಒಳಗಾದ ಸಮುದಾಯಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳು ಹಾಗು ರಾಜ್ಯದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಾರ್ಯನಿರ್ವಹಣೆ ಹಾಗು ಉತ್ತರದಾಯಿತ್ವದ ಕುರಿತು ಉತ್ತರ ಕರ್ನಾಟಕದ ಬೆಳಗಾವಿ ಹಾಗು ಬಾಗಲಕೋಟೆ ಜಿಲ್ಲೆಗಳ ಸಂತ್ರಸ್ಥ ಸಮುದಾಯಗಳ ಪ್ರತಿನಿಧಿಗಳು ಈ ಕೆಳಗಿನ ವಿಷಯಗಳನ್ನು ಸರ್ಕಾರದ ತುರ್ತು ಗಮನಕ್ಕೆ ತರಬಯಸುತ್ತೇವೆ:

1. **ಮಕ್ಕಳ ಹಕ್ಕುಗಳ ಉಲ್ಲಂಘನೆ ಹಾಗು ನೆರೆಯಿಂದಾಗಿ ಅವರು ಎದುರಿಸುತ್ತಿರುವ ಸಮಸ್ಯೆಗಳು:**
   - ✓ ಶಾಲಾ ಕಟ್ಟಡಗಳು ನೆಲಕ್ಕೆ ಕಚ್ಚಿವೆ ಹಾಗು ಶೌಚಾಲಯವು ನಾಶವಾಗಿದೆ. ಇದರಿಂದಾಗಿ ಆಸ್ಬೆಸ್ಟಾಸ್ ಶೀಟಿನ ಕೊಠಡಿಗಳಲ್ಲಿ ಹಾಗು ಮರದ ನೆರಳಿನ ಅಡಿಯಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸುವ ಪರಿಸ್ಥಿತಿ ಉಂಟಾಗಿದೆ. ಕಲಿಕಾ ಪರಿಕರಗಳಾದ ಸ್ಮಾರ್ಟ್ ಕ್ಲಾಸ್, ವಿಜ್ಞಾನ ಪ್ರಯೋಗದ ಸಾಮಾಗ್ರಿಗಳು, ಗ್ರಂಥಾಲಯದ ಪುಸ್ತಕಗಳು ನಾಶವಾಗಿವೆ. ಕ್ರೀಡಾ ಸಾಮಾಗ್ರಿಗಳು ನಾಶವಾಗಿವೆ. ಪ್ರವಾಹದಿಂದ ಅವರ ಮನೆಗಳು ಬಿದ್ದುಹೋಗಿರುವುದರಿಂದ ಬಾಡಿಗೆ ಮನೆಗಳಲ್ಲಿ ಇರುವುದರಿಂದ ಮಕ್ಕಳು ಪ್ರತಿನಿತ್ಯ ಶಾಲೆಗೆ ಹೋಗಿಬರಲು 10 ಕಿಲೋಮೀಟರ್ ನಡೆದುಕೊಂಡು ಹೋಗಬೇಕಾಗಿದೆ. ಸಮಾರು ಎರಡು ತಿಂಗಳು ಅವರ ವಿದ್ಯಾಭ್ಯಾಸವು ನಡೆದಿಲ್ಲ. ಆದುದರಿಂದ ಪರೀಕ್ಷೆಯನ್ನು ಎದುರಿಸಲು ಅವರು ಸಿದ್ಧರಿಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಓದುಲು ಪುಸ್ತಕಗಳು ಹಾಗು ಶಾಲಾಪಾಟಿಚೀಲ ಮತ್ತು ಶೂಗಳು ಅವರಿಗೆ ಇಲ್ಲ.
   - ✓ ನೆರೆಯ ಸಮಯದಲ್ಲಿ ಮಕ್ಕಳಿಗೆ ತೀವ್ರವಾದ ಹಾನಿಯುಂಟಾಗಿದೆ ಹಾಗು ಅಪಾರವಾದ ನಷ್ಟವನ್ನು ಅನುಭವಿಸಿದ್ದಾರೆ. ಅವರ ಮನೆಗಳು ನಾಶವಾಗಿವೆ, ಕುಟುಂಬಗಳು ಬಡತನಕ್ಕೆ ತುತ್ತಾಗಿವೆ, ಅವರು ತಾತ್ಕಾಲಿಕ ಮನೆಗಳಲ್ಲಿ ಬದುಕುತ್ತಿದ್ದಾರೆ. ತೀವ್ರವಾಗಿ ಹಾನಿಯನ್ನು ಅನುಭವಿಸಿರುವ ಮನೆಗಳಲ್ಲಿ ವಾಸಿಸುವುದನ್ನು ಮುಂದುವರಿಸುತ್ತಿದ್ದಾರೆ. ಅವರ ಪಂಚಾಯತ್‌ನಲ್ಲಿ ನೀರು, ವಿದ್ಯುತ್, ಶೌಚಾಲಯ ಹಾಗು ರಸ್ತೆಯ ಸೌಲಭ್ಯವಿಲ್ಲ.

- ✓ ಅವರು ಮಾನಸಿಕವಾಗಿ ಸಾಕಷ್ಟು ಒತ್ತಡಕ್ಕೆ ಒಳಗಾಗಿದ್ದಾರೆ. "ರಾತ್ರಿ ಮಲಗಿದರೆ ನಮ್ಮ ಕನಸಿನಲ್ಲಿ ನಮ್ಮ ಶಾಲೆ ಹಾಗು ಮನೆಯ ಬಗ್ಗೆ ಆತಂಕ ಉಂಟಾಗುತ್ತದೆ!" ಎಂದು ಹಂಚಿಕೊಂಡಿದ್ದಾರೆ.
- ✓ ಅಂಗನವಾಡಿ ಕೇಂದ್ರಗಳು ಸಂಪೂರ್ಣವಾಗಿ ಬಿದ್ದುಹೋಗಿವೆ. ದೇವಸ್ಥಾನದಲ್ಲಿ ಹಾಗು ಬಾಡಿಗೆ ಮನೆಗಳಲ್ಲಿ ಅಂಗನವಾಡಿ ಕೇಂದ್ರಗಳು ನಡೆಯುತ್ತಿವೆ.
- ✓ ಮಕ್ಕಳ ಹಕ್ಕುಗಳ ಖಾತ್ರಿಗಾಗಿ ಮಕ್ಕಳ ಗ್ರಾಮ ಸಭೆಗಳು ಎಲ್ಲಾ ಪಂಚಾಯತ್‌ಗಳಲ್ಲಿ ಕ್ರಮಬದ್ಧವಾಗಿ ಅಯೋಜಿಸುವ ಪ್ರಕ್ರಿಯೆಗೆ ಸರ್ಕಾರ ಬದ್ಧರಾಗಲೇಬೇಕು.
- ✓ ಬಿದ್ದುಹೋಗಿರುವ ಅಂಗನವಾಡಿ ಹಾಗು ಶಾಲಾ ಕಟ್ಟಡದ ನಿರ್ಮಾಣವನ್ನು ತುರ್ತು ವಿಷಯವೆಂದು ಪರಿಗಣಿಸಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿ ಬರುವ ಶೈಕ್ಷಣಿಕ ಸಾಲಿನ ಒಳಗೆ ಕಟ್ಟಡ ನಿರ್ಮಾಣ ಕಾರ್ಯಗಳನ್ನು ಪೂರ್ಣಗೊಳಿಸಬೇಕು.
- ✓ ಮುಖ್ಯವಾಗಿ 7ನೇ ಮತ್ತು 10ನೇ ತರಗತಿಯ ವಾರ್ಷಿಕ ಪರೀಕ್ಷೆಯನ್ನು ಕನಿಷ್ಠ 2 ತಿಂಗಳ ಕಾಲವಾದರೂ ಮುಂದೂಡಬೇಕು.
- ✓ ಮಕ್ಕಳ ವಾಸಸ್ಥಾನ ಅವರ ಬೆಳವಣಿಗೆ ಹಾಗು ವಿಕಾಸಕ್ಕೆ ಪೂರಕವಾಗಿರುವುದರಿಂದ ಹಾನಿಗೊಳಗಾಗಿರುವ ಇವರ ಮನೆಗಳ ಪುರ್ನನಿರ್ಮಾಣಕ್ಕೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು.
- ✓ ಮಕ್ಕಳನ್ನು ಮಾನಸಿಕ ಒತ್ತಡದಿಂದ ಬಿಡುಗಡೆ ಮಾಡುವ ನಿಟ್ಟಿನಲ್ಲಿ ಆಪ್ತಸಮಾಲೋಚನಾ ಕಾರ್ಯಕ್ರಮಗಳನ್ನು ಸಂಯೋಜಿಸಬೇಕು.

**2. ಮನೆಗಳ ಪುನರ್ವಸತಿಯಲ್ಲಿ ಉಂಟಾಗಿರುವ ಲೋಪದೋಶಗಳು:**

- ✓ ಮನೆಗಳ ಪುನರ್ವಸತಿಯ ಪರಿಹಾರವಾಗಿ ಸರ್ಕಾರವು ಸಂಪೂರ್ಣವಾಗಿ ಬಿದ್ದುಹೋಗಿರುವ (ಎ ವರ್ಗ) ಮನೆಗಳಿಗೆ 5 ಲಕ್ಷ ರುಪಾಯಿಗಳು, 30 ರಿಂದ 70% ಹಾನಿಗೊಳಗಾದ ಮನೆಗಳಿಗೆ (ಬಿ ವರ್ಗ) 1 ಲಕ್ಷ ರುಪಾಯಿಗಳು ಹಾಗು 5 ರಿಂದ 15% ಹಾನಿಗೊಳಗಾದ ಮನೆಗಳಿಗೆ (ಸಿ ವರ್ಗ) 25,000 ರುಪಾಯಿಗಳ ಪರಿಹಾರ ಘೋಷಣೆ ಮಾಡಿತ್ತು. ಸರ್ಕಾರದ ಬೊಕ್ಕಸದಲ್ಲಿ ಹಣ ಕಡಿಮೆ ಇದೆ ಎಂಬ ಕಾರಣ ನೀಡಿ ಪರಿಹಾರದ ಮೊತ್ತವನ್ನು ಎ ವರ್ಗಕ್ಕೆ 5 ಲಕ್ಷದಿಂದ 3 ಲಕ್ಷಕ್ಕೆ ಇಳಿಸುವ ಪ್ರಸ್ಥಾವನೆ ಇದೆ. ಈ ಕುರಿತು ಅಧಿಸೂಚನೆಗಳನ್ನು ಹೊರಡಿಸಲಾಗುವುದು ಎಂಬ ವಿಷಯವನ್ನು ಶಾಸಕರಿಂದ ಮಾಹಿತಿ ಪಡೆದ ಜನರು ಆತಂಕಕ್ಕೊಳಗಾಗಿದ್ದಾರೆ.
- ✓ ನೆರೆಯುಂಟಾದ ನಂತರ ಪರಿಹಾರಧನವನ್ನು ನೀಡುವುದಕ್ಕಾಗಿ ಮನೆಗಳಿಗೆ ಉಂಟಾಗಿರುವ ಹಾನಿಯ ಪ್ರಮಾಣವನ್ನು ಗುರುತಿಸಲು ಮಾಡಿರುವ 'ಎ ಬಿ ಸಿ' ವರ್ಗೀಕರಣ ಅವೈಜ್ಞಾನಿಕ. ಇದರಿಂದಾಗಿ ವರ್ಗೀಕರಣದಲ್ಲಿ ಹಲವಾರು ಲೋಪದೋಷಗಳು ಉಂಟಾಗಿದೆ. ಸಂಪೂರ್ಣವಾಗಿ ಬಿದ್ದುಹೋಗಿರುವ ಮನೆಗಳನ್ನು 'ಸಿ' ವರ್ಗ ಹಾಗು ಭಾಗಶಃ ದುರಸ್ತಿ ಮನೆಗಳನ್ನು 'ಎ' ವರ್ಗ ಎಂದು ತಪ್ಪಾಗಿ ಗುರುತಿಸಲಾಗಿದೆ. ಮೊದಲ ಸಮೀಕ್ಷೆ ಹಾಗು ದ್ವಿತೀಯ ಸಮೀಕ್ಷೆಯು ನಡೆದ ಗ್ರಾಮಗಳಲ್ಲಿ ಅವುಗಳು ಸಂಪೂರ್ಣವಾಗಿ ಏರುಪೇರಾಗಿರುವ ಹಲವಾರು ಉದಾಹರಣೆಗಳು ಇವೆ. ಬಿದ್ದುಹೋಗಿರುವ ಮನೆಗಳು ಎರಡೂ ಸಮೀಕ್ಷೆಯ ಪಟ್ಟಿಗಳಲ್ಲಿ ಸೇರ್ಪಡೆಯಾಗಿಲ್ಲ. ಮನೆಗಳು ಮೇಲ್ನೋಟಕ್ಕೆ ಬಿದ್ದುಹೋಗಿರುವಂತೆ ತೋರದಿದ್ದರೂ ಒಳಗೆ ಹಾನಿಯಾಗಿರುವುದನ್ನು ಗಮನಿಸಲು ಅಧಿಕಾರಿಗಳು ಪ್ರಯತ್ನವನ್ನು ಸಹ ಮಾಡಿಲ್ಲ. ಸಮೀಕ್ಷೆಯ ಮೇಲೆ ಸಾಕಷ್ಟು ಹಣವುಳ್ಳವರ, ಮೇಲ್ಪಂಕ್ತಿಯವರ ಹಾಗು ರಾಜಕೀಯ ವ್ಯಕ್ತಿಗಳ ಪ್ರಭಾವ ಇರುವುದರಿಂದ ಸಮೀಕ್ಷೆಯಲ್ಲಿ ಏರುಪೇರು ಆಗಿರುವುದು ಕಂಡುಬಂದಿದೆ. ಈ ವರ್ಗೀಕರಣದಲ್ಲಿ ಈಗಾಗಲೇ ಶಿಥಿಲವಾಗಿರುವ ಕಟ್ಟಡಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ ಹಾಗು ಪರಿಹಾರಧನ ನೀಡುವುದರಲ್ಲಿ ಯಾವುದೇ ನಿಯಮಿತ ಮಾರ್ಗಸೂಚಿಯನ್ನು ಪಾಲಿಸುತ್ತಿಲ್ಲ.
- ✓ ಈ ಸಮೀಕ್ಷೆಗಳನ್ನು ಅಧಿಕಾರಿಗಳು ನಡೆಸುತ್ತಿದ್ದಾರೆ ಹಾಗು ಇದರಲ್ಲಿ ಗ್ರಾಮ ಪಂಚಾಯತ್ ಯಾವುದೇ ಪಾತ್ರವನ್ನು ವಹಿಸುತ್ತಿಲ್ಲ. ಈ ಸಮೀಕ್ಷೆಯಲ್ಲಿ ಕಂಡುಬರುತ್ತಿರುವ ಅಕ್ರಮಗಳ ವಿಷಯವಾಗಿ ಯಾರು ಉತ್ತರದಾಯಿಯಾಗಲು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿಲ್ಲ. ದುರಸ್ತಿಯ ಮೇಲ್ವಿಚಾರಣೆಗಾಗಿ ಮಾಡಿರುವ ಆಪ್‌ನಲ್ಲಿ ದೊರಕುತ್ತಿರುವ ಮಾಹಿತಿಯು ಅಸಂಬದ್ಧವಾಗಿದೆ ಹಾಗು ತಪ್ಪು ವಿಷಯಗಳನ್ನು ತೋರಿಸುತ್ತಿದೆ. ಸಂತ್ರಸ್ಥ ಜನರಿಗೆ ಸಿಗಬೇಕಾದ ಪರಿಹಾರಧನ ಹಾಗು ದುರಸ್ತಿಗಾಗಿ ಬೇಕಾದ ಸಹಾಯವನ್ನು ಒದಗಿಸಲು ಇರಬೇಕಾದ ವ್ಯವಸ್ಥೆಯನ್ನು ನ್ಯಾಯಯುತವಾಗಿ, ಸುವ್ಯವಸ್ಥಿತವಾಗಿ ಹಾಗು ಉತ್ತರದಾಯಿಯಾಗಿ ನಿರ್ವಹಣೆಯಾಗುತ್ತಿಲ್ಲ.
- ✓ ಆಗಿರುವ ಅವ್ಯವಹಾರದ ಕುರಿತು ಗ್ರಮ ಪಂಚಾಯತ್‌ಗಳಲ್ಲಿ ಸತ್ಯಶೋಧನೆ ತಕ್ಷಣ ನಡೆಸಬೇಕು.

- ✓ ಅನ್ಯಾಯಕ್ಕೆ ಒಳಗಾಗಿರುವ ಹಕ್ಕುದಾರರಿಗೆ ಸೂಕ್ತ ಪರಿಹಾರ ನೀಡುವ ಕಾಲಮಿತಿಯಿರುವ ಪರಿಹಾರ ಕ್ರಮಗಳನ್ನು ಈ ಅಧಿವೇಶನದಲ್ಲಿ ಘೋಷಿಸಬೇಕು.

**3. ನದಿ ಪಾತ್ರದಲ್ಲಿ ಬದುಕುತ್ತಿರುವ ಸಮುದಾಯಗಳ ಸವಾಲುಗಳು:**

- ✓ 2005, 2009 ಹಾಗು 2019 ನೆರೆಯು ಕೃಷ್ಣ, ಮಲಪ್ರಭ ಹಾಗು ಘಟಪ್ರಭ ನದಿಪಾತ್ರದಲ್ಲಿ ಬದುಕುತ್ತಿರುವ ಸಮುದಾಯಗಳ ಬದುಕಿನ ಮೇಲೆ ತೀವ್ರವಾದ ಪರಿಣಾಮಗಳನ್ನು ಉಂಟುಮಾಡಿವೆ. ಈ ಸಮುದಾಯಗಳು ಆಲ್ಮಟ್ಟಿ, ಹಿಪ್ಪರಗಿ ಅಣೆಕಟ್ಟು ನಿರ್ಮಾಣದ ಸಂದರ್ಭದಲ್ಲಿಯೂ ಸಹ ಮುಳುಗಡೆಯ ಸಮಸ್ಯೆಯನ್ನು ಎದುರುಸಿ ಪರಿಣಾಮಕಾರಿಯಾದ ಪುನರ್ವಸತಿಯ ಅವಕಾಶದಿಂದ ವಂಚಿತರಾಗಿದ್ದು ವಿಭಿನ್ನ ಸ್ವರೂಪದ ಸವಾಲುಗಳನ್ನು ಎದುರಿಸುತ್ತಿದ್ದಾರೆ.
- ✓ ಹಿಪ್ಪರಿಗೆ ಹಾಗು ಆಲ್ಮಟ್ಟಿ ಯೋಜನೆಯಿಂದ ಹಾನಿಗೊಳಗಾದ ಗ್ರಾಮಗಳಿಗೆ ಸರಿಯಾದ ಪುನರ್ವಸತಿ ಮಾಡದೇ ಇರುವುದರಿಂದ, ಅವರು ಅದೇ ಗ್ರಾಮದಲ್ಲಿ ನದಿಯ ಪಾತ್ರದಲ್ಲೇ ಬದುಕುತ್ತಿದ್ದೂ, 2005 ರಿಂದ ಇಲ್ಲಯವರೆಗೂ ಸಹ ಎಲ್ಲಾ ರೀತಿಯ ತೆರಿಗೆಗಳನ್ನು ಕಟ್ಟಿಕೊಂಡು ಬಂದಿದ್ದರೂ, ಈ ಪ್ರವಾಹದ ಸಂದರ್ಭದಲ್ಲಿ ಇಂತಹ ಗ್ರಾಮಗಳನ್ನು ಅನಧಿಕೃತವೆಂದು ಘೋಶಿಸಿ ಅವರನ್ನು ಪರಿಹಾರದಿಂದ ವಂಚಿಸಲಾಗಿದೆ. ಸಂಪೂರ್ಣವಾಗಿ ಮನೆಯನ್ನು ಕಳೆದುಕೊಂಡ ಸಮುದಾಯಗಳು ತಾತ್ಕಾಲಿಕ ಶೆಡ್ಡುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದರೂ ಅವರನ್ನು ಪರಿಹಾರದ ಪಟ್ಟಿಯಿಂದ ಕೈಬಿಡಲಾಗಿದೆ. ಇಲ್ಲಿಯೂ ಸಹ ವರ್ಗೀಕರಣದಲ್ಲಿ ಅವ್ಯವಹಾರ ಹಾಗು ಪ್ರಭಾವಿ ವ್ಯಕ್ತಿಗಳ ಕೈವಾಡದಿಂದಾಗಿ ಅರ್ಹ ಹಕ್ಕುದಾರರು ಪರಿಹಾರದ ಸೌಲಭ್ಯದಿಂದ ವಂಚಿತರಾಗಿದ್ದಾರೆ.
- ✓ ಆಲ್ಮಟ್ಟಿ ಅಣೆಕಟ್ಟು ವಿಸ್ತರಣಾ ಯೋಜನೆ ಪರಿಣಾಮವಾಗಿ ಬಾಗಲಕೋಟೆಯ ಹಲವಾರು ಗ್ರಾಮಗಳು ಮುಳುಗಡೆಯ ಭೀತಿಯನ್ನು ಹಾಗು 2019 ರಲ್ಲಿ ಬಿದ್ದ ಮಳೆಯ ಶೇಕಡ 10% ರಷ್ಟು ಮಳೆ ಮುಂದಿನ ಸಾಲುಗಳಲ್ಲಿ ಬಿದ್ದರೆ ತೀವ್ರವಾದ ಹಾನಿಯನ್ನು ಅನುಭವಿಸುವ ಆತಂಕವನ್ನು ಎದುರಿಸುತ್ತಿದೆ.
- ✓ ಈ ಸಮುದಾಯಗಳಿಗೆ ಬದಲೀ ವ್ಯವಸ್ಥೆಯಾಗುವವರೆಗೆ ಬದುಕನ್ನು ನಿರ್ವಹಿಸಲು ಬಾಡಿಗೆ ವ್ಯವಸ್ಥೆಯನ್ನು ನೀಡದೆ ಇವರನ್ನು ಸಂಕಷ್ಟಕ್ಕೆ ದೂಡಲಾಗಿದೆ. ತುರ್ತು ಪರಿಹಾರವಾಗಿ ನೀಡಿರುವ ರುಪಾಯಿ 10,000 ಮೊದಲು ಚೆಕ್ ನಂತರ ಅರ್.ಟಿ.ಜಿ.ಎಸ್ ಮೂಲಕ ಹಣ ನೀಡುತ್ತೇವೆ ಎಂದು ಹೇಳಿ ಇದುವರೆಗೂ ಜನರಿಗೆ ಪರಿಹಾರ ಧನವನ್ನು ನೀಡುವಲ್ಲಿ ಸರ್ಕಾರ ವಿಫಲವಾಗಿದೆ.
- ✓ ನದಿಪಾತ್ರದ ಗ್ರಾಮಗಳನ್ನು ಅನಧಿಕೃತವೆಂದು ಘೋಷಿಸಿರುವುದನ್ನು ರದ್ದುಗೊಳಿಸಿ ತುರ್ತು ಪರಿಹಾರವನ್ನು ಆಧ್ಯತೆ ಮೇರೆಗೆ ನೀಡಬೇಕು.
- ✓ ಶಾಶ್ವತ ಪರಿಹಾರಕ್ಕಾಗಿ ವಿಶೇಷ ಗ್ರಾಮ ಸಭೆಯನ್ನು ಆಯೋಜಿಸಿ ಪುನರ್ವಸತಿಗಾಗಿ ಕ್ರಿಯಾಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.
- ✓ ಈಗಾಗಲೇ ಪುನರ್ವಸತಿಗೊಂಡಿರುವ ಗ್ರಾಮಗಳಿಗೆ ಮೂಲಭೂತ ವ್ಯವಸ್ಥೆಯನ್ನು ಮತ್ತು ಬದುಕಲು ಯೋಗ್ಯವಾದ ಮನೆಗಳನ್ನು ನಿರ್ಮಾಣ ಮಾಡಲೇಬೇಕು.

**4. ನೆರೆಯಿಂದಾಗಿ ವೃದ್ಧರು, ಮಹಿಳೆಯರಿಂದ ನಿರ್ವಹಣೆಗೊಳ್ಳುತ್ತಿರುವ ಕುಟುಂಬಗಳು ಹಾಗು ವಿಕಲಚೇತನರು ಎದುರಿಸುತ್ತಿರುವ ಸಮಸ್ಯೆಗಳು:**

- ✓ ನೆರೆಯಿಂದ ತೀವ್ರವಾದ ಹಾನಿಯನ್ನು ಅನುಭವಿಸುತ್ತಿರುವ ಕುಟುಂಬಗಳಲ್ಲಿ ಬಹಳ ಚಿಕ್ಕ ಮಕ್ಕಳು, ಒಬ್ಬಂಟಿ ಹೆಣ್ಣು ಮಕ್ಕಳು, ವೃದ್ಧರು, ದೈಹಿಕ ಹಾಗು ಮಾನಸಿಕ ದುರ್ಬಲತೆಯಿರುವ ವ್ಯಕ್ತಿಗಳು, ನೆರೆಯಿಂದ ಸಾವನಪ್ಪಿರುವ ಕುಟುಂಬದ ಸದಸ್ಯರಿರುವ ಕುಟುಂಬಗಳು ಸಾಕಷ್ಟಿವೆ.
- ✓ ಪ್ರವಾಹದಿಂದಾಗಿ ಸಾವನ್ನಪ್ಪಿರುವ ಮಕ್ಕಳು ಹಾಗು ಕುಟುಂಬದ ಸದಸ್ಯರಿಗೆ ನೀಡಬೇಕಾದ ಪರಿಹಾರ ನೀಡಿಲ್ಲ. ಈ ಪರಿಹಾರವನ್ನು ಪಡೆಯಲು ಸತ್ತ ವ್ಯಕ್ತಿ ಹಾಗು ಅವರ ಕುಟುಂಬದವರ ನಡುವೆ ಸಂಬಂಧವನ್ನು ರುಜುವಾತುಗೊಳಿಸಲು ಡಿ.ಎನ್.ಎ ಯಂತಹ ಅಮಾನವೀಯ ಪರೀಕ್ಷೆಗೆ ಗುರಿಮಾಡಿದೆ.
- ✓ ಇವರು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ ಹಾಗು ಇವರಿಗೆ ಯಾವುದೇ ಸಹಾಯವು ದೊರಕುತ್ತಿಲ್ಲ. ಇಂತಹ ಸದಸ್ಯರಿರುವ ಕುಟುಂಬಗಳಿಗೆ ಕೇವಲ 25,000 ರುಪಾಯಿಗಳನ್ನು ಕೊಟ್ಟು ತಮ್ಮ ಮನೆಗಳನ್ನು ಯಾವುದೇ ಸಹಾಯವಿಲ್ಲದೆ ಕಟ್ಟಿಕೊಳ್ಳಲು ತಮ್ಮ ಪಾಡಿಗೆ ಬಿಟ್ಟಿರುವ ಪರಿಸ್ಥಿತಿ ಉಂಟಾಗಿದೆ ಹಾಗು ಯಾವುದೇ ಅಗತ್ಯ ಸಲಹೆ ಸಹಾಯವನ್ನು ಸ್ಥಳೀಯಾಡಲಿತ ಅಥವ ಜಿಲ್ಲಾಡಳಿತ ಒದಗಿಸಿಲ್ಲ.
- ✓ ಪ್ರವಾಹದಿಂದ ಸಾವನ್ನಪ್ಪಿರುವ ಕುಟುಂಬಗಳನ್ನು ಯಾವುದೇ ಪರೀಕ್ಷೆಗೆ ಒಳಪಡಿಸದೆ ತಕ್ಷಣವೇ 5 ಲಕ್ಷ ರುಪಾಯಿಗಳ ಪರಿಹಾರ ನೀಡಬೇಕು.

✓ ಮಹಿಳೆಯರ ನಿರ್ವಹಣೆಯಲ್ಲಿರುವ ಮನೆಗಳ ಪುರ್ನನಿರ್ಮಾಣ ಸಂದರ್ಭದಲ್ಲಿ ವಿಶೇಷ ವರ್ಗವೆಂದು ಪರಿಗಣಿಸಿ ಈ ಮನೆಗಳ ಪುನರ್ವಸತಿಗಾಗಿ ತಗಲುವ ಪೂರ್ಣ ವೆಚ್ಚ ಹಾಗು ಬೇಕಾದ ತಾಂತ್ರಿಕ ಮತ್ತು ಕಾನೂನಿನ ಸಲಹೆಗಳನ್ನು ತ್ರಿಸ್ಥರ ಸರ್ಕಾರಗಳು ನೀಡಲು ಕ್ರಮ ಕೈಗೊಳ್ಳಲೇಬೇಕು.

5. **ಬೆಳೆ ನಾಶದ ಪರಿಹಾರ ನಿರ್ವಹಣೆಯಲ್ಲಿ ಆಗಿರುವ ಲೋಪದೋಷಗಳು:**

✓ ನೆರೆ ಪೀಡಿತ ಪ್ರದೇಶಗಳಲ್ಲಿನ ಸಮುದಾಯಗಳಿಗೆ ಜೀವನೋಪಾಯಕ್ಕೆ ಇರುವ ದಾರಿಗಳೆಲ್ಲಾ ನಾಶವಾಗಿ, ತಮ್ಮ ಕೆಲಸಗಳನ್ನು ಕಳೆದುಕೊಂಡಿದ್ದಾರೆ ಹಾಗು ಅವರು ಬೆಳೆದ ಬೆಳೆಯು ನೆರೆಗೆ ತುತ್ತಾಗಿ ಸಂಪೂರ್ಣವಾಗಿ ನಾಶವಾಗಿಹೋಗಿದೆ. ಬೆಳೆಯ ನಷ್ಟವನ್ನು ಲೆಕ್ಕಮಾಡಿ ಪ್ರತಿಯೊಂದು ಕುಟುಂಬಕ್ಕೆ ನೀಡಬೇಕಾದ ಪರಿಹಾರಧನವನ್ನು ನೀಡಲು ಸರಿಯಾದ ಒಂದು ವ್ಯವಸ್ಥೆ ಇಲ್ಲ. ಇದುವರೆಗೂ ಬೆಳೆ ಮತ್ತು ಸಾಕು ಪ್ರಾಣಿಗಳ ಪರಿಹಾರ ಜನರಿಗೆ ತಲುಪಿಸಲು ಸರ್ಕಾರವು ವಿಫಲವಾಗಿದೆ.

✓ ನರೇಗಾ ಕಾಯ್ದೆಯನುಸಾರ ಪ್ರಕೃತಿ ವಿಪತ್ತು ಸಂದರ್ಭದಲ್ಲಿ (ಬರ ಹಾಗು ನೆರೆ) 150 ದಿನ ಉದ್ಯೋಗ ನೀಡುವುದರ ಮೂಲಕ ಜನರ ಆರ್ಥಿಕ ಸಂಕಷ್ಟಕ್ಕೆ ನೆರವಾಗಬೇಕೆಂದು ಉಲ್ಲೇಖವಿದೆ. ಆದರೆ ಈ ಪ್ರದೇಶಗಳಲ್ಲಿ ಜನರಿಗೆ ಬಹುತೇಕ ಗ್ರಾಮಗಳಲ್ಲಿ ಉದ್ಯೋಗವನ್ನು ನೀಡುತ್ತಿಲ್ಲ. ಮಾಡಿದ ಕೆಲಸಕ್ಕೆ ತಕ್ಕದಾದ ಕೂಲಿ ಹಣವನ್ನು ನೀಡುತ್ತಿಲ್ಲ. ಹಣವಿಲ್ಲವೆಂಬ ಕಾರಣವನ್ನು ಒಡ್ಡಿ ಕೆಲಸಕ್ಕೆ ಅರ್ಜಿಗಳನ್ನು ತೆಗೆದುಕೊಳ್ಳುತ್ತಿಲ್ಲ.

✓ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಸಮುದಾಯಗಳಿಗೆ ನೆರವಾಗುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಹಾಗಾಗಿ ತಕ್ಷಣದಿಂದಲೇ ಪುನರ್ವಸತಿಯ ಕೆಲಸಗಳನ್ನು ಈ ಯೋಜನೆಯೊಂದಿಗೆ ಹೊಂದಿಸಿಕೊಂಡು 150 ದಿನ ಕೆಲಸ ನೀಡುವ ತುರ್ತು ಕ್ರಮವನ್ನು ಸರ್ಕಾರ ಕೈಗೊಳ್ಳಲೇಬೇಕು.

✓ ಬೆಳೆ ವಿಮೆ ಹಾಗು ಬೆಳೆ ನಾಶದ ಪರಿಹಾರವನ್ನು ತಕ್ಷಣ ಬಿಡುಗಡೆ ಮಾಡಬೇಕು. ಬೆಳೆ ಅಂದಾಜಿನಲ್ಲಿ ಆಗಿರುವ ಲೋಪದೋಷವನ್ನು ಸರಿಪಡಿಸಲು ಮರುಸಮೀಕ್ಷೆ ಪ್ರಕ್ರಿಯೆಯನ್ನು ಕೈಗೊಳ್ಳಲೇಬೇಕು.

6. **ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರದ ಜವಾಬ್ದಾರಿ ನಿರ್ವಹಣೆಯಲ್ಲಿ ಕಂಡುಬಂದ ಲೋಪದೋಷಗಳು:**

✓ 2006 ರಲ್ಲಿಯೇ ರಾಷ್ಟ್ರೀಯ ವಿಪತ್ತು ನಿರ್ವಹಣ ಕಾಯ್ದೆ ಜಾರಿಯಾಗಿದೆ. ಈ ಕಾಯ್ದೆಯು ಎಲ್ಲಾ ಸರ್ಕಾರಗಳು ಪ್ರಕೃತಿ ವಿಕೋಪವನ್ನು ಎದುರಿಸಲು ಬೇಕಾದ ತಯಾರಿ, ಪ್ರತಿಕ್ರಿಯೆ, ಪುನರ್ವಸತಿ ಹಾಗು ತಡೆಗಟ್ಟುವಿಕೆಗಾಗಿ ಸ್ಪಷ್ಟವಾದ ಮಾರ್ಗಸೂಚಿಯನ್ನು ನೀಡಿದ್ದರೂ ನಮ್ಮ ಘನ ಸರ್ಕರ ಅದನ್ನು ಕಡೆಗಣ್ಣಿನಿಂದಲೂ ನೋಡಿಲ್ಲವೆಂಬುದು ನೆರೆ ಪರಿಹಾರದ ನಿರ್ವಹಣೆಯನ್ನು ಗಮನಿಸಿದಾಗ ವೇದ್ಯವಾಗುವ ಅಂಶಗಳು. 2019 ನೆರೆ ಸಂಭವಿಸಿದ ನಂತರ ಕರ್ನಾಟಕದ ಉಚ್ಚ ನ್ಯಾಯಾಲಯ ತಾಕೀತು ಮಾಡಿದ ನಂತರವೇ ವಿಪತ್ತು ನಿರ್ವಹಣೆ ನೀತಿ ಸಂಹಿತೆಯನ್ನು ರಾಜ್ಯ ಸರ್ಕಾರ ರಚಿಸಿರುವುದು ಮೇಲಿನ ಮಾತಿಗೆ ಹಿಡಿದ ಕೈಗನ್ನಡಿ.

✓ ನಮ್ಮ ರಾಜ್ಯದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಆಡಳಿತದ ಪ್ರಸ್ತುತ ನಿಲುವು ಸ್ಪಷ್ಟವಾಗುತ್ತಿಲ್ಲ. ಗ್ರಾಮ ಪಂಚಾಯತ್‌ಗಳಿಗಾಗಲಿ, ಸ್ಥಳೀಯ ಸರ್ಕಾರಗಳಿಗಾಗಲಿ ಅಥವ ಸಮುದಾಯಗಳಿಗೆ ಈ ಪ್ರಾಧಿಕಾರವು ಯಾವುದೇ ಸಹಾಯವನ್ನು ಒದಗಿಸುತ್ತಿರುವ ಸಕಾರಾತ್ಮಕ ಉದಾಹರಣೆಗಳು ನಮಗೆ ಕಂಡುಬಂದಿಲ್ಲ. ಕೈಗೊಂಡಿರುವ ಕೆಲಸಗಳಿಗೆ ಆಗಿರುವ ಹಣಕಾಸು ಖರ್ಚಿನ ವಿವರ ಅಥವ ಕೈಗೊಂಡಿರುವ ಪರಿಹಾರ ಕ್ರಮಗಳ ವಿವರಗಳು ಯಾವುವು ಸಾರ್ವಜನಿಕವಾಗಿ ದೊರಕುತ್ತಿಲ್ಲ. ಈ ಆಡಳಿತವು ನಿಜವಾದ ಅರ್ಥದಲ್ಲಿ ಯಾರಿಗೆ ಉತ್ತರದಾಯಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದ ಪ್ರಶ್ನಾರ್ಹ.

✓ ಪ್ರಕೃತಿ ವಿಕೋಪವನ್ನು ನಿರ್ವಹಿಸಲು ಬೇಕಾದ ವ್ಯವಸ್ಥೆಗಳನ್ನು ಕಟ್ಟಿಕೊಳ್ಳುವ ಅಂಶಗಳು ಗ್ರಾಮಾಭಿವೃದ್ಧಿಯ ಯೋಜನೆಯ ಭಾಗವಾಗಬೇಕು.

✓ ಈ ಪ್ರಾಧಿಕಾರ ಸಕ್ಷಮತೆಯಿಂದ ಕಾರ್ಯನಿರ್ವಹಿಸಲು ಬೇಕಾದ ಸಾಮರ್ಥ್ಯಭಿವೃದ್ಧಿ ಮತ್ತು ಹಣಕಾಸಿನ ಲಭ್ಯತೆಯನ್ನು ಮಾಡಲೇಬೇಕಾದ ಅನಿವಾರ್ಯ ಸ್ಥಿತಿಯಲ್ಲಿದ್ದೇವೆ.

✓ ಈ ಪ್ರಾಧಿಕಾರಕ್ಕೂ ಮತ್ತು ಉಳಿದ ಇಲಾಖೆಗಳ ನಡುವಿನ ಸಮನ್ವಯತೆಯನ್ನು ಏರ್ಪಡಿಸುವ ಕಾರ್ಯತಂತ್ರಗಳನ್ನು ರೂಪಿಸಲೇಬೇಕು.

✓ ಮಳೆ ಮತ್ತು ನೆರೆಯಿಂದ ಹರಿದುಬಂದ ನೀರನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಈ ನೀರನ್ನು ಸಂಗ್ರಹಿಸುವ ಸಕಾರಾತ್ಮಕ ಕ್ರಿಯಾಯೋಜನೆಗಳನ್ನು ರೂಪಿಸಬೇಕು.

- ✓ ವಿಪತ್ತು ನಿರ್ವಹಣೆ ಕಾಯ್ದೆಯನುಸಾರ ಎಲ್ಲಾ ಜಿಲ್ಲೆ, ತಾಲೂಕು ಹಾಗು ಗ್ರಾಮ ಪಂಚಾಯತ್ ಮಟ್ಟದಲ್ಲಿ ಜನರನ್ನೊಳಗೊಂಡ ಸಮಿತಿಯನ್ನು ರಚಿಸಿ ಅವುಗಳ ಕಾರ್ಯೋನ್ಮುಖತೆಗೆ ಬೇಕಾದ ತರಬೇತಿಗಳನ್ನು ನೀಡಬೇಕು.
- ✓ ಸಮುದಾಯಗಳು ಸಮರ್ಥವಾಗಿ ಪ್ರಾಕೃತಿಕ ವಿಪತ್ತುಗಳನ್ನು ಎದುರಿಸುವ ತಯಾರಿ, ಸಂಭವಿಸಿದ ಸಂದರ್ಭದಲ್ಲಿ ಸಮಿತಿಗಳ ಸಕ್ರಿಯ ಭಾಗವಹಿಸುವುಕೆ ಹಾಗು ವಿಪತ್ತುಗಳು ಸಂಭವಿಸದಂತೆ ಭವಿಷ್ಯದ ಯೋಜನೆಗಳನ್ನು ರೂಪಿಸುವಂತೆ ಮಾಡಲು ಬೇಕಾದ ತಾಂತ್ರಿಕ ನೆರವು, ಹಣಕಾಸಿನ ಸೌಲಭ್ಯವನ್ನು ಸ್ಥಳೀಯ ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಗಳ ಸಂಯೋಜನೆಯ ಮೂಲಕ ನಡೆಸುವಂತಹ ಕ್ರಮಗಳನ್ನು ಕೈಗೊಳ್ಳಬೇಕು.

ಈ ಹಿನ್ನಲೆಯಲ್ಲಿ ರಾಜ್ಯ ಹಾಗು ಸ್ಥಳೀಯ ಸರ್ಕಾರಗಳು ವಿಪತ್ತು ನಿರ್ವಹಣೆಯನ್ನು ಒಂದು ಆದ್ಯ ವಿಷಯವನ್ನಾಗಿ ಪರಿಗಣಿಸಿ ಜನರಿಗಾಗಿರುವ ಅದರಲ್ಲೂ ಬಡ ಮತ್ತು ಶೋಷಿತ ಸಮುದಾಯಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದರ ಮೂಲಕ ಮಕ್ಕಳ ಹಾಗು ಸಮುದಾಯಗಳ ಹಕ್ಕನ್ನು ಎತ್ತಿ ಹಿಡಿಯಬೇಕೆಂದು ಆಗ್ರಹಪೂರಕವಾಗಿ ಒತ್ತಾಯಿಸುತ್ತಿದ್ದೇವೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನೀಲಯ್ಯ, ಸಾಮಾಜಿಕ ಕಾರ್ಯಕರ್ತರು, ಆಕ್ಷನ್ ಏಡ್: +91 – 9880606883
ಕವಿತಾ ರತ್ನ, ನಿರ್ದೇಶಕರು, ವಕೀಲಿ, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್: +91 – 9448990480
ಕೃಪಾ.ಎಂ.ಎಂ, ಸಂಯೋಜಕರು, ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ: +91 – 9945375430
ಶಾರದ ಗೋಪಾಲ್, ಜಾಗೃತ ಮಹಿಳಾ ಒಕ್ಕೂಟ: +91 – 9902840033